**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ ೩೩೬/೨೦೧೩ ಸಿ.ಡಬ್ಲ್ಯೂ–೧೯ ಪಿ.ಡಬ್ಲ್ಯೂ-೦೭

| | | |
|---|---|---|
| ಹೆಸರು | ಃ | ಹಾಲೇಶ |
| ತಂದೆ:ಗಂಡ | ಃ | ಆಂಜನೆಯಪ್ಪ |
| ವಯಸ್ಸು | ಃ | ೪೩ ವರ್ಷ |
| ಉದ್ಯೋಗ | : | ಆಂತರಿಕ ಭದ್ರತಾ ವಿಭಾಗ |
| ವಾಸಸ್ಥಳ | ಃ | ಬೆಂಗಳೂರು |

ದಿನಾಂಕಃ ೨೩.೦೯.೨೦೨೪
ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ**

ನಾನು ೦೧.೦೫.೨೦೧೨ ರಿಂದ ೨೫.೦೨.೨೦೧೩ ವರೆಗೆ ಆಳಂದ ಪೋಲಿಸ ಠಾಣೆಯಲ್ಲಿ ಪಿ.ಎಸ್.ಐ. ಎಂದು ಕಾರ್ಯ ನಿರ್ವಹಿಸಿದ್ದೇನೆ.

ದಿ. ೦೧.೦೫.೨೦೧೨ ರಂದು ಈ ಪ್ರಕರಣದ ಕಡತವನ್ನು ಚಾಸಾ-೮ ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದುವರೆಸಿ ದಿ.೧೬.೧೧.೨೦೧೨ ರಂದು ಚಾಸಾ-೧ ರವರ ಮರು ಹೇಳಿಕೆಯನ್ನು ಪಡೆದುಕೊಂಡು ಕಡತದಲ್ಲಿ ಅಳವಡಿಸಿಕೊಂಡೆನು. ದಿ.೧೭.೧೧.೨೦೧೨ ರಂದು ಚಾಸಾ-೨ ಮತ್ತು ೩ ರವರ ಹೇಳಿಕೆಯನ್ನು ಪಡೆದುಕೊಂಡು ಕಡತದಲ್ಲಿ ಅಳವಡಿಸಿಕೊಂಡೆನು. ದಿ.೨೨.೧೧.೨೦೧೨ ರಂದು ಚಾಸಾ-೪ ರವರ ಹೇಳಿಕೆಯನ್ನು ಪಡೆದುಕೊಂಡು ಕಡತದಲ್ಲಿ ಅಳವಡಿಸಿಕೊಂಡೆನು. ದಿ.೨೫.೧೧.೨೦೧೨ ರಂದು ಚಾಸಾ-೫ ರವರ ಹೇಳಿಕೆಯನ್ನು ಪಡೆದುಕೊಂಡು ಕಡತದಲ್ಲಿ ಅಳವಡಿಸಿಕೊಂಡೆನು. ದಿ.೦೭.೧೧.೨೦೧೨ ರಂದು ಚಾಸಾ-೭ ರವರ ಹೇಳಿಕೆಯನ್ನು ಪಡೆದುಕೊಂಡು ಕಡತದಲ್ಲಿ ಅಳವಡಿಸಿಕೊಂಡೆನು. ಚಾಸಾ-೬ ರವರಿಂದ ಅನರ್ಹ ಫಲಾನುಭವಿಗಳು ಸಲ್ಲಿಸಿದ ದಾಖಲಾತಿಗಳನ್ನು ಕಡತಗಳನ್ನು ಮತ್ತು ಸುತ್ತೋಲೆಗಳನ್ನು ಪಡೆದುಕೊಂಡು ಕಡತದಲ್ಲಿ ಅಳವಡಿಸಿಕೊಂಡೆನು. ನಾಡ ಕಾರ್ಯಾಲಯ ಖಜೂರವರಿಂದ ಸತ್ಯಾಪನಾ ವರದಿಯನ್ನು ಪಡೆದುಕೊಂಡು ಕಡತದಲ್ಲಿ ಅಳವಡಿಸಿಕೊಂಡೆನು.

ನಿಪಿ-೧೧ ರಿಂದ ೧೬ ನ್ನು ತಹಸೀಲ್ದಾರವರಿಂದ ಪಡೆದುಕೊಂಡು ಕಡತದಲ್ಲಿ ಅಳವಡಿಸಿಕೊಂಡೆನು. ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿರುತ್ತಾರೆ. ನಿಪಿ-೧೭ ರಿಂದ ೨೧ ನ್ನು ಪಡೆದುಕೊಂಡು ಕಡತದಲ್ಲಿ ಅಳವಡಿಸಿಕೊಂಡೆನು. ತನಿಖೆ ಪೂರ್ಣಗೊಂಡ ಕಾರಣ ಕಡತಗಳೆಲ್ಲವನ್ನು ಪರಿಶೀಲಿಸಿ ಆರೋಪಿ ವಿರುದ್ದ ಸಾಕಷ್ಟು ಸಾಕ್ಷಾಧಾರಗಳು ಇದ್ದ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

**<u>ಪಾಟೀ ಸವಾಲುಃ- ಆರೋಪಿ ನಂ.೧ ರ ಪರ ಶ್ರೀ ಬಿ.ಎ.ಡಿ. ವಕೀಲರಿಂದ.</u>**

ಆರೋಪಿ ನಂ.೧ ರವರಿಗೆ ಕಾನೂನುಬದ್ದವಾಗಿ ಮಾಸಾಶನ ಮಂಜೂರಾಗಿರುತ್ತದೆ ಎಂಧರೆ ಸರಿ ಅಲ್ಲ. ಸುತ್ತೋಲೆ ಪ್ರಕಾರ ಹೆಚ್ಚಿನ ಭೂಮಿಯನ್ನು ಹೊಂದಿರುತ್ತಾರೆ ಎಂದು ವರದಿ ಬಂದಿರುತ್ತಾರೆ, ಆ ಕಾರಣದಿಂದ ಅನರ್ಹರೆಂದು ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. 11.02.2011 ರಂದು ಒಂದು ಸುತ್ತೋಲೆ ಬಂದಿರುತ್ತದೆ, ಆ ಪ್ರಕಾರ ಆರೋಪಿ ನಂ.೧ ಕಾನೂನುಬದ್ದವಾಗಿ ಪಿಂಚಣಿ ಪಡೆದುಕೊಳ್ಳುತ್ತಿದ್ದಾರೆ ಎಂದು ಗೊತ್ತಾಯಿತು. ಆರೋಪಿ ನಂ.೧ ಸಣ್ಣ ರೈತನಿರುವ ಕಾರಣ ಮತ್ತು ಪಿಂಚಣಿಯನ್ನು ಪಡೆದುಕೊಳ್ಳಲು ಅರ್ಹ ವಯಸ್ಕನಿದ್ದ ಕಾರಣ ಪಡೆದುಕೊಂಡಿರುತ್ತಾನೆ ಎಂಧರೆ ಸರಿ ಅಲ್ಲ. ನಿಮ್ಮ ತನಿಖಾ ಸಮಯದಲ್ಲಿ ಆರೋಪಿ ನಂ.೧ ತನ್ನ ಎಲ್ಲಾ ಆಸ್ತಿಗಳನ್ನು ತನ್ನ ಮಕ್ಕಳಿಗೆ ಪಾಲು ವಾಟ್ನಿ ಮಾಡಿಕೊಟ್ಟಿರುತ್ತಾನೆ ಎಂದು ನಿಮ್ಮ ತನಿಖಾ ವೇಳೆಯಲ್ಲಿ ಕಂಡು ಬಂದಿತಾ ಎಂದರೆ ಸಾಕ್ಷಿ ವರದಿಗಳನ್ನು ನೋಡಿದ ನಂತರ ಕಂಡು ಬಂದಿತು ಎಂದು ನುಡಿಯುತ್ತಾರೆ. ನಿಪಿ-೧೬ರಲ್ಲಿ ಆರೋಪಿ ನಂ.೧ ರವರು 4 ಎ-15 ಗುಂಟೆ ಜಮೀನಿನ ಮಾಲೀಕ ಎಂದು ಬರೆದಿರುತ್ತದೆ ಎಂಧರೆ ಸರಿ, ಸಾಕ್ಷಿ ಮುಂದುವರೆದು ಸ.ನಂ. 89/3 ರಲ್ಲಿ 5 ಎಕರೆ ಜಮೀನು ಸಹ ಕೂಡ ಅವನ ಹೆಸರಿನಲ್ಲಿರುತ್ತದೆ ಎಂದು ನುಡಿಯುತ್ತಾರೆ. ಸ.ನಂ.17/7 ರಲ್ಲಿ 1 ಎಕರೆ 36 ಗುಂಟೆ ಜಮೀನು ಇರುತ್ತದೆ. ಸದರಿ ಸ.ನಂ. 17/7 ರ ಮಾಲೀಕರು ಬೌರಮ್ಮ ಗಂಡ ಚಂದುರಾಯ ಎಂದು ಬರೆದಿದ್ದು ಇರುತ್ತದೆ ಎಂದರೆ ಸರಿ. ಸದರಿ ನಿಪಿ-20 ರ ಕಾಲಂ ನಂ.೧೧ರಲ್ಲಿ ಎಂ.ಆರ್. ನಂ.123/2008-9 ವಿಭಾಗ ದಿ.27.09.2009 ಎಂದು ಬರೆದಿರುತ್ತದೆ ಎಂದರೆ ಸರಿ. ಸದರಿ ನಿಪಿ-19 ರಲ್ಲಿ ಕಾಲಂ ನಂ.9 ರಲ್ಲಿ ಸಿದ್ದರಾಮ ತಂದೆ ಚಂದುರಾಯ ರವರು ಮಾಲೀಕರು ಎಂದು ಇರುತ್ತದೆ ಎಂದರೆ ಸರಿ. ಎಂ.ಆರ್.ನಂ.120/2008-09 ರ ಪ್ರಕಾರ ದಿ,.07.07.2009 ರಲ್ಲಿ ವಿಭಜನೆ ಆದ ಕುರಿತು ಬರೆದಿರುತ್ತದೆ ಎಂದರೆ ಸರಿ. ಸದರಿ ನಿಪಿ-18 ರಲ್ಲಿ ಸ.ನಂ.89/2 ಜಮೀನಿನ ಆರ್.ಟಿ.ಸಿ. ಇರುತ್ತದೆ ಎಂದರೆ ಸರಿ, ಅದರಲ್ಲಿ ಕಾಲಂ ನಂ.9 ರಲ್ಲಿ ಪರಮೇಶ್ವರ ತಂದೆ ಚಂದುರಾಯ ಎಂದು ಬರೆದಿರುತ್ತದೆ ಎಂಧರೆ ಸರಿ. ಎಂ.ಆರ್. ನಂ. 121/2008-09 ರ ಪ್ರಕಾರ ವಿಭಜನೆ ಎಂದು ಬರೆದಿರುತ್ತದೆ ಎಂಧರೆ ಸರಿ. ಸದರಿ ಪಾಲು ವಾಟ್ನಿ ಮತ್ತು ವರ್ಗಾವಣೆ ಕಾನೂನು ಬದ್ದವಾಗಿದೆ ಎಂಧರೆ ಸರಿ. ಸದರಿ ವರ್ಗಾವಣೆಗಳು ಏನಾದರೂ ರದ್ದಾಯಿತಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ತನಿಖಾ ಸಮಯದಲ್ಲಿ ಅವರ ವಯಸ್ಸಿನ ದಾಖಲೆ ಅವರ ಆಸ್ತಿಗಳ ದಾಖಲೆ ತಪ್ಪಾಗಿ ಕೊಟ್ಟಿರುತ್ತಾನೆ ಎಂದು ಕಂಡು ಬಂದಿತಾ ಎಂದರೆ ಸಾಕ್ಷಿ ಇಲ್ಲ ಎಂಧು ನುಡಿಯುತ್ತಾರೆ. ಮಾಸಾಶನ ಯಾವ ತಾರೀಖಿನಂದು ಸ್ಯಾಂಕ್ಷನ ಆಗಿದೆ ಎಂದು ನಿಮ್ಮ ತನಿಖಾ ವೇಳೆಯಲ್ಲಿ ಗೊತ್ತಾಯಿತಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ತನಿಖಾ ಸಮಯದಲ್ಲಿ ಆರೋಪಿ ನಂ.೧ ಯಾವುದೇ ಅಪರಾಧವನ್ನು ಎಸಗದಿರುವುದು ಕಂಡು ಬಂದರೂ ಚಾಸಾ-೧ ರವರು

ಖೊಟ್ಟಿಯಾಗಿ ಫಿರ್ಯಾದಿಯನ್ನು ಸಲ್ಲಿಸಿರುತ್ತಾರೆ, ಅದಕ್ಕೆ ಪೂರಕವಾಗಲಿ ಎಂದು ಖೊಟ್ಟಿಯಾಗಿ ತನಿಖೆ ಮಾಡಿ ಖೊಟ್ಟಿಯಾಗಿ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ ಅಲ್ಲ. ಆರೋಪಿ ನಂ.೧ ರವರ ಮತ್ತು ಅವರ ಹೆಂಡತಿ ಮಕ್ಕಳ ಹೇಳಿಕೆಗಳನ್ನು ಪಡೆದುಕೊಂಡಿರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

**<u>ಪಾಟೀ ಸವಾಲುಃ- ಆರೋಪಿ ನಂ.೨ ರ ಪರ ಶ್ರೀ ಎಸ್.ಎ.ಕೆ. ವಕೀಲರಿಂದ.</u>**

ನಮ್ಮ ತನಿಖೆ ಪೂರ್ಣಗೊಂಡ ನಂತರ ನಮ್ಮ ಠಾಣೆಯಲ್ಲಿ ಅಂತಿಮ ವರದಿಗೆ ಒಂದು ನಂಬರನ್ನು ನೀಡಿ ಅಂತಿಮ ವರದಿಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿ. ಸದರಿ ಈ ಪ್ರಕರಣದ ಅಂತಿಮ ವರದಿಯನ್ನು ನಂಬರನ್ನು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಚಾಸಾ-6 ರವರು ಒಂದು ಫಿರ್ಯಾದಿಯನ್ನು ಸಲ್ಲಿಸಿದ್ದಾರೆ ಎಂದು ಹೇಳುತ್ತೀರಲ್ಲ, ಅವರು ಸಲ್ಲಿಸಿದ ಫಿರ್ಯಾದಿಯನ್ನು ಈ ಪ್ರಕರಣದ ದಾಖಲಾತಿಗಳ ಜೊತೆ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ, ಅವರು ನೀಡಿರುವ ಹೇಳಿಕೆ ಮತ್ತು ದಾಖಲಾತಿಗಳನ್ನು ಪಡೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿ ನಂ.೧ ಅರ್ಜಿಯಲ್ಲಿ ಸಲ್ಲಿಸಿದ ಮಾಹಿತಿ ಮತ್ತು ಅದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ನೋಡಿ ಸರಿ ಇದೆಯೋ ತಪ್ಪು ಇದೆಯೋ ಎಂದು ಕಂಡು ಬಂದಿತಾ ಎಂದರೆ ಸಾಕ್ಷಿ ಸರಿ ಇದೆ ಎಂದು ಕಂಡು ಬಂದಿರುತ್ತದೆ, ಸಾಕ್ಷಿ ಮುಂದುವರೆದು ಸದರಿ ಅವರನ್ನು ಅನರ್ಹಗೊಳಿಸಿರುವ ಬಗ್ಗೆ ಆದೇಶ ಪ್ರತಿಯನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿ ನಂ.೨ ರವರು ಆರೋಪಿ ನಂ.೧ ರವರು ಸಲ್ಲಿಸಿದ ದಾಖಲಾತಿಗಳ ಆಧಾರದ ಮೇಲೆಯೇ ಮಾಸಾಶನವನ್ನು ಆದೇಶ ಮಾಡಿರುತ್ತಾರೆ ಎಂಧರೆ ಸರಿ. ತನಿಖೆ ಮಾಡುವ ಸಮಯದಲ್ಲಿ ಫಲಾನುಭವಿ ನಿರ್ದಿಷ್ಟವಾಗಿ ಇಷ್ಟಿಷ್ಟೇ ಜಮೀನುಗಳನ್ನು ಹೊಂದಿರಬೇಕು ಎಂದು ನಿಮಗೆ ಗೊತ್ತಾಯಿತಾ ಎಂದರೆ ಸಾಕ್ಷಿ ಸುತ್ತೋಲೆಯನ್ನು ಪಡೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಜಮೀನು ಒಂದೇ ವಿಷಯ ಅಲ್ಲ ಬೇರೆಬೇರೆ ಕ್ರೈಟೇರಿಯಾಗಳನ್ನು ಹೊಂದಿರುತ್ತದೆ ಎಂದು ನುಡಿಯುತ್ತಾರೆ. ಸುತ್ತೋಲೆಯಲ್ಲಿ ನಿರ್ದಿಷ್ಟವಾಗಿ ಇಷ್ಟೇ ಜಮೀನನ್ನು ಹೊಂದಿರಬೇಕು ಎಂದು ಎಲ್ಲಿ ಬರೆದಿರುತ್ತದೆ ಎಂದು ತೋರಿಸಿ ಎಂದರೆ ಸಾಕ್ಷಿ ನಿಪಿ-೨೪ ನ್ನು ತೋರಿಸಿ ಅದರಲ್ಲಿ ಕಂಡಿಷನ ನಂ.೬ನೇದ್ದು ಇರುತ್ತದೆ ಎಂದು ನುಡಿಯುತ್ತಾರೆ. ನಾನು ಪಡೆದುಕೊಂಡ ದಾಖಲಾತಿಗಳಲ್ಲಿ ಆರೋಪಿ ನಂ.೧ ಕೇವಲ 4 ಎ-5 ಗುಂಟೆ ಜಮೀನಿನ ಮಾಲೀಕ ಇರುತ್ತಾನೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಹೆಂಡತಿ ಮತ್ತು ಮಕ್ಕಳ ಹೆಸರಿನಲ್ಲೂ ಕೂಡ ಜಮೀನು ಹೊಂದಿರುತ್ತಾರೆ ಎಂದು ನುಡಿಯುತ್ತಾರೆ.

ನಿಪಿ-೨೪ನ್ನು ತೋರಿಸಿ ಉದ್ದೇಶಿತ ಸಾಮಾಜಿಕ ಭದ್ರತಾ ವೇತನ ಫಲಾನುಭವಿಗಳ ಆದಾಯವನ್ನು ಘೋಷಿಸಿದಲ್ಲಿ ವಯಸ್ಕ ಮಕ್ಕಳ ಆದಾಯವನ್ನು ಪರಿಗಣನೆಗೆ ತೆಗೆದುಕೊಳ್ಳಬಾರದೆಂದು ಕಂಡಿಷನ ಇರುತ್ತದೆ ಎಂದರೆ ಸರಿ. ಕಂಡಿಷನ ನಂ.೪ರಲ್ಲಿ ಫಲಾನುಭವಿಯ ಪತ್ನಿ ಅಥವಾ ಸಂಯೋಜಿತ ಠೇವಣಿಗಳ ಒಟ್ಟುಮೌಲ್ಯವು ರೂ.10000/- ಗಳಿಗಿಂತ ಹೆಚ್ಚಾಗಿರಬಾರದೆಂದು ಹೇಳಿರುತ್ತದೆ ಎಂಧರೆ ಸರಿ. ಉಪತಹಸೀಲ್ದಾರವರು ತಮಗೆ ಯಾವುದಾದರೂ ಒಂದು ಅರ್ಜಿಗಳು ಬಂದರೆ ಅವರು ಕಂದಾಯ ನಿರೀಕ್ಷಕರು ಮತ್ತು ಗ್ರಾಮ ಲೆಕ್ಕಾಧಿಕಾರಿಗಳು ವರದಿಯನ್ನು ಪಡೆದುಕೊಂಡು ಆ ವರದಿಯ ಆಧಾರದ ಮೇಲೆ ಪಿಂಚಣಿ ಆದೇಶವನ್ನು ಮಾಡುತ್ತಾರೆ ಎಂಧರೆ ಸರಿ, ಸಾಕ್ಷಿ ಮುಂದುವರೆದು ಅವರ ಅನುಪಸ್ಥಿತಿಯಲ್ಲೂ ಸಹ ಆದೇಶ ಮಾಡಬಹುದು ಎಂದು ನುಡಿಯುತ್ತಾರೆ. ನೀವು

ನಿಮ್ಮ ತನಿಖಾ ಸಮಯದಲ್ಲಿ ಕಂದಾಯ ನಿರೀಕ್ಷಕರ ಮತ್ತು ಗ್ರಾಮ ಲೆಕ್ಕಾಧಿಕಾರಿಗಳ ಕುರಿತು ವಿಚಾರಣೆ ಮಾಡಿ ಅವರೇನಾದರೂ ವರದಿಯನ್ನು ಸಲ್ಲಿಸಿದ್ದಾರಾ ಅಥವಾ ಇಲ್ಲ ಎಂದು ತಿಳಿದುಕೊಳ್ಳಲು ನೀವೇನಾದರೂ ದಾಖಲಾತಿಯನ್ನು ಪಡೆದುಕೊಂಡು॰ ಅವರ ಹೇಳಿಕೆಯನ್ನು ಪಡೆದುಕೊಂಡಿರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾಎ, ಮುಂದುವರೆದು ತಹಸೀಲ್ದಾರವರ ಹೇಳಿಕೆ ಪಡದಯಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಚಾಸಾ-೧ ರವರು ನೀಡಿರುತ್ತಾರೆ ಅದಕ್ಕೆ ಅನುಗುಣವಾಗಿ ಅವರು ನೀಡಿರುವ ದಾಖಲಾತಿಗಳನ್ನು ಪಡೆದುಕೊಂಡು ಖೊಟ್ಟಿ ಪ್ರಕರಣ ದಾಖಲಾಸಿಕೊಂಡಿರುತ್ತೇನೆ ಎಂದರೆ ಸರಿ ಅಲ್ಲ. ಚಾಸಾ-೧ ರವರು ಮತ್ತು ಚಾಸಾ-೬ ರವರು ತಾವು ಮಾಡಿರುವ ತಪ್ಪನ್ನು ಮುಚ್ಚಿ ಹಾಕಲು ಒಂದು ಖೊಟ್ಟಿ ಫಿರ್ಯಾದಿಯನ್ನು ಸಲ್ಲಿಸಿರುತ್ತಾರೆ, ಅದಕ್ಕೆ ಪೂರಕವಾಗಲಿ ಎಂದು ಖೊಟ್ಟಿ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ ಅಲ್ಲ.

[ ಆರೋಪಿ ನಂ.೨ ರ ಪರ ವಕೀಲರು ಆರೋಪಿ ನಂ.೧ ರವರ ಪರ ವಕೀಲರು ಮಾಡಿರುವ ಪಾಟೀ ಸವಾಲನ್ನು ತಮ್ಮ ಪಾಟೀ ಸವಾಲಿನಲ್ಲಿ ಅಳವಡಿಸಿಕೊಂಡಿರುತ್ತಾರೆ ]

ಮರುವಿಚಾರಣೆ : ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.